ತೀರಿಕೊಂಡಿದ್ದಾರೆ, ಈಗತಾನೆ ಡಾ.ಯು.ಆರ್.ಅನಂತಮೂರ್ತಿಯವರು ಕೂಡ ಶವಸಂಸ್ಕಾರದಲ್ಲಿ ಪಾಲ್ಗೊಳ್ಳಲು ಆಗಲಿಲ್ಲ, ನಿಮ್ಮಲ್ಲಿ ಬಹಳಷ್ಟು ಕಾಲ ಪಾರ್ಥಿವ ಶರೀರವನ್ನು ಇಡುವುದಿಲ್ಲ. ಆದ್ದರಿಂದ ನಾವು ಒಂದು ಗಂಟೆಗೆ ಶವಸಂಸ್ಕಾರವನ್ನು ಮಾಡುತ್ತೇವೆ, ಆಗುವುದಿಲ್ಲವೆಂದು ಹೇಳಿದರು. ಹಾಗಾಗಿ ಅಲ್ಲಿಗೆ ನಾವು ಹೋಗುವುದಕ್ಕಾಗಲಿಲ್ಲ. ಅಲ್ಲಿಗೆ ಜಿಲ್ಲಾಧಿಕಾರಿಯವರು ಹೋಗಿದ್ದಾರೆ. ಸರ್ಕಾರದ ಪರವಾಗಿ ರೀತ್ ಇಟ್ಟಿದ್ದಾರೆ. ಗೌರವ ಸಲ್ಲಿಸಿದ್ದಾರೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಕೆ.ವಿ.ಸುಬ್ಬಣ್ಣನವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು. ಈಗ ಸದನವನ್ನು 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2ಗಂಟೆ 1 ನಿಮಿಷಕ್ಕೆ ಮುಂದೂಡಲ್ಪಟ್ಟು, ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು

(ಸದನವು ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಪುನ: ಸೇರಿತು, ಮಾನ್ಯ ಸಭಾಧ್ಯಕ್ಷರು(ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ವಿನಿವಿಂಕ್ ವಂಚನೆ ಪ್ರಕರಣದಲ್ಲಿ ರಾಜಕಾರಣಿಗಳು ಶಾಮೀಲಾಗಿದ್ದಾರೆ ಎನ್ನುವ ರೀತಿಯಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಬಗ್ಗೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಭಾಧ್ಯಕ್ಷರೆ, ವಿನಿವಿಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ನಾನಾ ರೀತಿಯಲ್ಲಿ ಬರುತ್ತಿದೆ.

ಅಧ್ಯಕ್ಷರು: ಪತ್ರಿಕೆಗಳಲ್ಲಿ ಏನೇನೋ ಬರುತ್ತಲೇ ಇರುತ್ತವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಈ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕೆಂದು ಬಯಸುತ್ತೇವೆ.

ಅಧ್ಯಕ್ಷರು: ಯಾವುದೇ ನೋಟೀಸ್ ಕೊಡದೆ ಚರ್ಚೆಯಾಗಬೇಕೆಂದರೆ ಹೇಗೆ ಹೇಳಿ? ನಿಯಮಾವಳಿ ಪ್ರಕಾರ ಇರುವ ವಿಷಯಗಳನ್ನು ಏನು ಮಾಡುವುದು?

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಪತ್ರಿಕೆಗಳಲ್ಲಿ ಈ ವಂಚನೆ ಪ್ರಕರಣದಲ್ಲಿ ರಾಜಕಾರಣಿಗಳು ಶಾಮೀಲಾಗಿದ್ದಾರೆಂಬ ಸಂಶಯ ಬರುವರೀತಿಯಲ್ಲಿ ಪ್ರಕಟಣವಾಗಿದೆ, ಯಾರ್ಯಾರಿರಬಹುದೆಂಬುದನ್ನು ಸರ್ಕಾರ ಬಹಿರಂಗಪಡಿಸಬೇಕು, ಇಲ್ಲವಾದರೆ ಜನರು ತಪ್ಪಾಗಿ ತಿಳಿದುಕೊಳ್ಳಲು ಅವಕಾಶವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಇದರಲ್ಲಿ ರಾಜಕಾರಣಿಗಳು ಸೇರಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿರುತ್ತದೆ, ಅವರ್ಯಾರು ಎಂಬುದನ್ನು ಸರ್ಕಾರ ಈ ಸದನದಲ್ಲಿ ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ಇನ್ನೊಂದು ದಾರ್ಶನಿಕ ಫೌಂಡೇಷನ್ ಎಂಬ ಕಂಪನಿಯದು ಇದೇ ಗತಿಯಾಗಿದೆ, ಅದರ ಸ್ಥಿತಿಗತಿ ಏನೆಂಬುದನ್ನೂ ಕೂಡ ಸರ್ಕಾರ ಸದನಕ್ಕೆ ತಿಳಿಸಬೇಕೆಂದು ಒತ್ತಾಯಿಸುತ್ತೇನೆ.

ಅಧ್ಯಕ್ಷರು: ಈ ಬಗ್ಗೆ ಒಂದು ನೋಟೀಸ್ ಕೊಡಿ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಏನೋ ಇಲ್ಲದೆ ಸುಮ್ಮನೆ ಹಾಗೆ ಚರ್ಚೆ ಮಾಡುವುದಾದರೂ ಹೇಗೆ ಹೇಳಿ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಯಾವುದಾದರೂ ನಿಯಮದಡಿಯಲ್ಲಿ ಇದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು: ಚರ್ಚೆಯಾಗಲಿ ಎಂಬುದೇ ನನ್ನ ಉದ್ದೇಶ, ಸುಮ್ಮನೆ ಚರ್ಚೆಗೆ ಅವಕಾಶ ಮಾಡಿಕೊಡಿ ಅಂದರೆ ನಾನು ಯಾವ ನಿಯಮದಡಿ ಕೊಡಲಿ? ಒಂದು ನೋಟೀಸ್ ಕೊಟ್ಟರೆ ಅದಕ್ಕೆ ಸರ್ಕಾರವು ಕೂಡ ಉತ್ತರ ಕೊಡಲು ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ನಾವು ನೋಟೀಸ್ ಕೊಟ್ಟು ಸರ್ಕಾರ ಉತ್ತರ ಕೊಡಬೇಕಾಗಿಲ್ಲ, ಇದು ಗಂಭೀರವಾದ ವಿಷಯವಾದುದ್ದರಿಂದ ಸರ್ಕಾರವೇ ಉತ್ತರಕೊಡಲು ಮುಂದಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳು ವಿನಿವಿಂಕ್ ವಂಚನೆಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ರಾಜಕಾರಣಿಗಳು ಕೂಡ ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವ ರೀತಿಯಲ್ಲಿ ಬಂದಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಮೊನ್ನೆಯದಿವಸ ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯ ಪ್ರಸ್ತಾಪ ಮಾಡಿ ಈ ಬಗ್ಗೆ ಸದನ ಸಮಿತಿ ಮಾಡಬೇಕೆಂದು ಒತ್ತಾಯಿಸಿದಾಗ, ಅದಕ್ಕೆ ಸರ್ಕಾರ ತಕ್ಷಣ ಸಮ್ಮತಿ ಕೊಟ್ಟಿದ್ದು ತಾವು ಮಾನ್ಯ ಅಧ್ಯಕ್ಷರಾಗಿ ಆದೇಶ ಮಡಿರುತ್ತೀರಿ. ಮಾನ್ಯ

ಸಚಿವರಾದ ದೇಶಪಾಂಡೆಯವರೂ ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆಂದು ತೋರಿಸಿ, ನಾನೂ ಕೂಡ ಅದರಲ್ಲಿ ಶಾಮೀಲಾಗಿರುವ ರೀತಿಯಲ್ಲಿ ಸಂಶಯ ಬರುವಂತೆ ಎಲೆಕ್ಟ್ರಾನಿಕ್ಸ್ ಮಾಧ್ಯಮದಲ್ಲಿ ತೋರಿಸಿರತ್ತಾರೆ. I was confused. I have not attended any programme of them. ನಾನು ಹೋಗಿದ್ದು ವಿನಿವಿಂಕ್ ಸಂಸ್ಥೆಯ ಖಾಸಗಿ ಸಮಾರಂಭಕ್ಕೆ ಅಲ್ಲ. ಬ್ರಾಹ್ಮಣ ಮಹಾಸಭಾ ಕಾರ್ಯಕ್ರಮಕ್ಕೆ ಹೋಗಿದ್ದೆ, ಅಲ್ಲಿ ನನ್ನಂತೆ ವಿವಿಧ ಪಕ್ಷದ ಹಿರಿಯ ಮುಖಂಡರು ಸಹ ಬಂದಿದ್ದರು. ಪ್ರತಿ ದಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇವೆ. ಹಾಗೆಯೇ ಬ್ರಾಹ್ಮಣ ಮಹಾಸಭಾ ಕಾರ್ಯಕ್ರಮಕ್ಕೂ ಅಥಿತಿಯಾಗಿ ಹೋಗಿದ್ದೆನಷ್ಟೇ; Please understand. ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದೇನೆಂದರೆ, ದಾರ್ಶನಿಕ ಫೌಂಡೇಷನ್ ಏನಿದೆ, ಅದು ಕೋಅಪರೇಟಿವ್ ಆಕ್ಟ್ ಅಡಿಯಲ್ಲಿ ಬರುವುದಿಲ್ಲ. ಮಾರ್ಚ್ 23 ರಂದು ಮಾಧುಸ್ವಾಮಿಯವರು ಸದನದಲ್ಲಿ ವಿನಿವಿಂಕ್,ಸೌಹಾರ್ದ ಸಹಕಾರಿ ಸಂಘಗಳ ಬಗ್ಗೆ ಪ್ರಸ್ತಾಪ ಮಾಡಿರುವುದು ರೆಕಾರ್ಡನಲ್ಲಿದೆ. ನಾನು ಸಹ ಅದರ ಬಗ್ಗೆ ವಿಚಾರಣೆ ಮಾಡಲು ಹೇಳಿದ್ದು ನನಗೆ ನೆನಪು ವಿನಿವಿಂಕ್ ಸಂಸ್ಥೆಯ ವಂಚನೆಗೆ ಸಂಬಂಧಿಸಿದಂತೆ ಒಬ್ಬ ನಿರ್ದೇಶಕನನ್ನು ಪೋಲಿಸ್‌ನವರು ಅರೆಸ್ಟ್ ಮಾಡಿದ್ದಾರೆ, ಇಬ್ಬರು ಡೈರೆಕ್ಟರ್ಸ್‌ಗಳಿಂದ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದಾರೆ. ರಿಕಾರ್ಡ ಸೀಜ್ ಮಾಡಿದ್ದಾರೆ, ಸಿಸಿಬಿ ಯವರು ತನಿಖೆಯನ್ನು ಮಾಡುತ್ತಿದ್ದಾರೆ. ಇನ್ನು ಕೋರ್ಟ್ ಆದೇಶವಿಲ್ಲದೆ ಸಂಸ್ಥೆಯ ಪ್ರಾಪರ್ಟಿ ಅಟಾಚ್‌ಮೆಂಟ್ ಮಾಡಿಕೊಳ್ಳಲಾಗುವುದಿಲ್ಲ. ಈ ಬಗ್ಗೆ ಗೃಹಮಂತ್ರಿಗಳೊಡನೆ ಕೂಡ ಮಾತನಾಡುತ್ತೇನೆ. ಸರ್ಕಾರದ ಹಾಗೂ ನನ್ನ ಉದ್ದೇಶ ಡೆಪಾಸಿಟರ್ಸ್ ಏನಿದ್ದಾರೆ ಅವರ ಇಂಟ್ರೆಸ್ಟ್ ಅನ್ನು ಸೇಫ್‌ಗಾರ್ಡ್ ಮಾಡುವುದಾಗಿರುತ್ತದೆಂದು ನಾನು ಸ್ಪಷ್ಟಪಡಿಸುತ್ತೇನೆ. Depositors interest is supreme. ಇದರಲ್ಲಿ ಯಾವ ಸಂದೇಹವೂ ಬೇಡ, ಅಕ್ಷಯ ಎನ್ನುವ ಇನ್ನೊಂದು ಕಂಪನಿ ಇದೆ, ಆ ಬಗ್ಗೆಯೂ ಪೋಲಿಸ್ ಡಿಪಾರ್ಟ್‌ಮೆಂಟ್‌ನವರಿಗೆ ತಿಳಿಸಿದ್ದೇವೆ, Though they are not Co-operative institutions, still we have informed the police commissioner. ಇಷ್ಟೆಲ್ಲಾ ಆದರೂ ಕೂಡ ಇವತ್ತಿನ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಮತ್ತೊಂದು ಸಂಸ್ಥೆ 625 ರೂಪಾಯಿಗಳನ್ನು ಡೆಪಾಸಿಟ್ ಮಾಡಿದರೆ 18 ತಿಂಗಳಲ್ಲಿ ನಿಮಗೆ ನೀಡಿದ ಮೊತ್ತದ ಡಬ್ಬಲ್ ಕೊಡುತ್ತೇವೆಂದು ಜಾಹಿರಾತು ಕೊಟ್ಟಿದ್ದಾರೆ, ಈ

ಬಗ್ಗೆಯೂ ಕೂಡ ಪೋಲಿಸ್ ಡಿಪಾರ್ಟ್‌ಮೆಂಟ್‌ಗೆ ಕ್ರಮ ತೆಗೆದುಕೊಳ್ಳಲು ಪತ್ರ ಬರೆದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಉತ್ತರಕೊಡಲು ಅನುಕೂಲವಾಗುತ್ತದೆ. ಹಿಂದೆ ಇದೇ ಸದನದಲ್ಲಿ ಮಾನ್ಯ ಮಾಧುಸ್ವಾಮಿಯವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ತನಿಖೆ ಮಾಡಿಸುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದರಲ್ಲಿ ರಾಜಕಾರಣಿಗಲು ಶಾಮೀಲಾಗಿದ್ದಾರೆ ಎಂದು ಬಂದಿದೆ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು): ನಿಮಗೆ ರಿಪ್ಲೈ ಬೇಕೋ ಬೇಡವೋ? ನನಗೆ ಉತ್ತರ ಹೇಳುವುದಕ್ಕೆ ಅವಕಾಶವನ್ನು ಕೊಡಿ.

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ: ಅದರ ಬಗ್ಗೆ ಪೋಲೀಸರಿಂದ ತನಿಖೆಯನ್ನು ಮಾಡಿಸಿದ್ದಾರೋ ಇಲ್ಲವೋ ಎಂದು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿ ಮಾನ್ಯ ಸದಸ್ಯರುಗಳು ಏನೇನು ವಿಷಯಗಳನ್ನು ಎತ್ತುತ್ತಾರೆ, ಅದನ್ನು ನೋಡಿಕೊಂಡು ಸಚಿವರು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಮೊದಲು ಅವರು ನೋಟೀಸನ್ನು ಕೊಡಲಿ. ಆಗ ಮಾನ್ಯ ಸಚಿವರು ಸನ್ಮಾನ್ಯ ಸದಸ್ಯರುಗಳು ಇಂಥ ವಿಚಾರಗಳನ್ನು ಎತ್ತಿದ್ದಾರೆಂದು ಸಮಗ್ರವಾಗಿ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಮೊದಲು ಅವರು ನೋಟೀಸನ್ನು ಕೊಡಲಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸರ್ಕಾರ ಈಗಾಗಲೇ ಅದರ ಬಗ್ಗೆ ಉತ್ತರವನ್ನು ಕೊಡಬೇಕಾಗಿತ್ತು.

ಅಧ್ಯಕ್ಷರು: ಯಾವ ವಿಚಾರವನ್ನು ಎತ್ತಬೇಕೆಂದು ಇದ್ದೀರೋ ಅದಕ್ಕೆ ಮೊದಲು ನೋಟೀಸನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರದ ಕರ್ತವ್ಯವೇನು? ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾಗಲಿ ಈ ರೀತಿ ಇಂಥವರನ್ನು ಬಂಧಿಸಿದ್ದೇವೆ, ಈ ರೀತಿ ಮಾಡಿದ್ದೇವೆ ಎಂದು ಹೇಳುವುದು ಬೇಡವೇ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, I will give some information. ಈಗ ಅವರು ಮೈನ್ಸ್ ಅನ್ನೂ ಕೂಡ ಎಕ್ಸ್‌ಪೋರ್ಟ್ ಮಾಡಿದ್ದಾರೆ. ಮಂಗಳೂರು ಪೋರ್ಟ್‌ನಿಂದ 35 ಸಾವಿರ ಮೆಟ್ರಿಕ್ ಟನ್‌ನಷ್ಟು ಮಂಗಳೂರು ಪೋರ್ಟ್‌ನಿಂದ ವೆಸ್ಟ್‌ಬೆಂಗಾಲ್‌ಗೆ ಕಳುಹಿಸಿದ್ದಾರೆ. ಇನ್ನು ಎರಡು ಸಾವಿರ ಟನ್‌ನಷ್ಟು ಅಲ್ಲಿಯೇ ಉಳಿದಿದೆ. ಅಲ್ಲಿ 50 ಲಕ್ಷ ರೂಪಾಯಿ ಸೆಕ್ಯುರಿಟಿ ಡಿಪಾಸಿಟ್ ಇದೆ. ನ್ಯೂ ಮಂಗಳೂರು ಪೋರ್ಟ್‌ನಲ್ಲಿದೆ. ಅದನ್ನು Freeze ಮಾಡುವುದಕ್ಕೆ ಹೇಳಿ. ಈ ಎರಡು ಸಾವಿರ ಟನ್‌ಗೆ ಪುನ: ಅದಕ್ಕೆ 30 ಲಕ್ಷ ರೂಪಾಯಿ. ಅದನ್ನೂ ಕೂಡ ಅಲಿ Freeze ಮಾಡಿಸಿ. ಇದು ಮಾತ್ರವಲ್ಲ. ಈ ಹಣವನ್ನು ನೀವು ಒಂದು ಮಾಡಬೇಕು, ಫೈನಾನ್ಸ್ ಕಂಪನಿಗೆ ಅವರು ಹಣವನ್ನು ತೆಗೆದುಕೊಂಡು ಬೇರೆಯವರಿಗೆ ಲೋನ್ ಕೊಡುತ್ತಾರಾ? ಅದನ್ನು ಅವರ ಬಿಸಿನೆಸ್‌ಗೆ ಡೈವರ್ಟ್ ಮಾಡುತ್ತಾರಾ ಎಂದು. ಹೆಚ್ಚಿನ ಫೈನಾನ್ಸ್ ಕಂಪನಿಗಳು ಹೋಗಿರುವುದು ಇದರಿಂದಲೇ. ಅವರು ಕಡಿಮೆ ಬಡ್ಡಿಯಲ್ಲಿ ಹಣವನ್ನು ತೆಗೆದುಕೊಳ್ಳುವುದು, ಅದನ್ನು ಅವರ ಬಿಜಿನೆಸ್‌ಗೆ ಹಾಕಿಕೊಳ್ಳುವುದು. ಅವರು ಒಂದು ಕಡೆ ಲಾಸ್ ಆದಾಗ ಇಡೀ ಕಂಪನಿಯೇ ಮುಚ್ಚಿಹೋಗುತ್ತದೆ. ಜನರು ಮುಗ್ಧರಲ್ಲ. ಅವರದ್ದು ತಪ್ಪಿದೆ. ನಾನು ಜನರದ್ದು ತಪ್ಪಿಲ್ಲ ಎಂದು ಹೇಳುವುದಿಲ್ಲ. ಏಕೆಂದರೆ ಬ್ಯಾಂಕಿನಲ್ಲಿ ಕಡಿಮೆ ಬಡ್ಡಿ ಎಂದು ದಿನನಿತ್ಯ ಪತ್ರಿಕೆಯಲ್ಲಿ ಬರುವಾಗ ಅವರು ಹೋಗಿ ಈ ರೀತಿ ಹಣವನ್ನು ಇಡುವುದು ತಪ್ಪಿದೆ. ಆದರೆ ಸರ್ಕಾರದ ಇಲಾಖೆಗಳೇನು ಮಾಡುತ್ತಿವೆ ಎಂದು ನಾನು ಕೇಳುತ್ತೇನೆ. ಅವರವರ ಏರಿಯಾದಲ್ಲಿ ಏನೇನು ಬಿಸಿನೆಸ್ ಬರುತ್ತದೆ, ಇದರ ಬಗ್ಗೆ ಅವರಿಗೆ ಮಾಹಿತಿ ಇಲ್ಲದಿದ್ದರೆ ಹೇಗೆ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಸಚಿವರು ಅದರ ಬಗ್ಗೆಯೇ ಹೇಳುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಸರ್ಕಾರ ಹೇಳುವುದು ಬೇಡವೇ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಮಗೆ ಸರಿಯಾದ ಉತ್ತರವನ್ನು ಕೊಡಿ.

ಶ್ರೀ ಎಸ್.ಎಸ್. ಪಾಟೀಲ್: ಅವರು ಉತ್ತರ ಕೊಡುವುದು ಹೇಗೆ? ಪೇಪರ್‌ನಲ್ಲಿ ಬಂದಿರುವುದನ್ನು ಈ ರೀತಿ ಹಿಡಿದುಕೊಂಡು ಬಂದುಬಿಟ್ಟರೆ ಹೇಗೆ? ಏನು ಮಾಡುವುದು?

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಜಯಪ್ರಕಾಶ್ ಹೆಗಡೆಯವರು ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ಕೂಡಲೇ ನಾನು ಪಾಸ್ ಆನ್ ಮಾಡುತ್ತೇನೆ. Within next one hour, I will see that it is passed on to the concerned police officers. ಎರಡನೆಯದು, ನಿಮಗೆ ಹೇಳಿದೆ. ಇಲ್ಲಿ ಬಹಳ ಸುಧೀರ್ಘವಾಗಿ ಚರ್ಚೆಯಾಗಿದೆ. ಕೆಲವು ಒಳ್ಳೆಯ ಸಲಹೆಗಳು ಬಂದಿವೆ. ಆ ಸಲಹೆ ಮೇರೆಗೆ ತಾವೇನು ಸಲಹೆಗಳನ್ನು ಕೊಟ್ಟಿದ್ದೀರಿ, In addition to vini-vinc, ಮೂರು-ನಾಲ್ಕು ಕಂಪನಿಗಳ ಬಗ್ಗೆ ಚರ್ಚೆ ಮಾಡಿದ್ದೀರಿ. ಮಣಿಪಾಲ್ ಬಗ್ಗೆ ಹೇಳಿದ್ದೀರಿ. ಅಕ್ಷಯ ಬಗ್ಗೆ ಹೇಳಿದ್ದೀರಿ, ದಾರ್ಶನಿಕ ಬಗ್ಗೆ ಹೇಳಿದ್ದೀರಿ, ಅವೆಲ್ಲಾ ತಿಳಿಸಿದ್ದೇವೆ. ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಪೋಲಿಸರಿಗೆ ಹೇಳಿದ್ದೇವೆ. ಇವತ್ತು ಮತ್ತೆ ಒಂದು ಪತ್ರಿಕೆಯಲ್ಲಿ ಆ ತರಹದ ಅಡ್ವರ್‌ಟೈಸ್‌ಮೆಂಟ್ ವಿಜಯಕರ್ನಾಟಕದಲ್ಲಿ ಬಂದಿದೆ. 625 ಕೊಟ್ಟರೆ 18 ತಿಂಗಳಲ್ಲಿ ಡಬಲ್ ಮಾಡುತ್ತೇವೆಂದು. ಇದು ಗಮನಕ್ಕೆ ಬಂದಕೂಡಲೇ immediately, we have also written to the police about this. It is not a co-operative institution. It a kerala based instution still. ಇದು ಆಗಬಾರದಲ್ಲಾ, ಕೂಡಲೇ ನಾವು ಅದರ ಬಗ್ಗೆ ಪೋಲೀಸರಿಗೆ ಹೇಳಿದ್ದೇವೆ. ಪ್ರಶ್ನೆ ಏನು ಇದೆ, ನಾನು ಹೇಳಿದೆ, ಈಗ ನಾನು ಈ ವಿಚಾರದಲ್ಲಿ ನಾನೇ ಪ್ರಸ್ತಾಪ ಮಾಡುವವನಿದ್ದೆ. ನನ್ನ ಡಿಮ್ಯಾಂಡ್ ಬಗ್ಗೆ ಇತ್ತಲ್ಲಾ, ತಾವು ಕೇಳಿದಾಗ ನಾನು ಪೋಲೀಸ್ ಅಧಿಕಾರಿಗಳಿಗೆ ಕರೆದದ್ದೇನೆ. ಅವರು ನನಗೆ ಹೇಳಿದ ಪ್ರಕಾರ one Director has been arrested.ಎರಡು ಡೈರೆಕ್ಟರ್ ಮೇಲೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಶ್ರೀನಿವಾಸ್ ಅವರು apprehend ಆಗಿಲ್ಲ. ಟೀಮ್ಸ್ ಮಾಡಿ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಅವರ ಡಾಕ್ಯುಮೆಂಟ್ಸ್‌ನ್ನು ಸೀಜ್ ಮಾಡಿದ್ದಾರೆ. ನಂತರ ಕಂಪ್ಯೂಟರ್ಸ್ ಎಲ್ಲಿ ಹಾಡ್‌ಕಾಪಿ ಬರುತ್ತದೆ ಅವೆಲ್ಲವನ್ನೂ ಸೀಜ್ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಶಾಖೆಗಳು ಎಲ್ಲಿದ್ದಾವೆ, ಅಲ್ಲೆಲ್ಲಾ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಅವರ ಪ್ರಾಪರ್ಟೀಸ್ ಏನೇನು ಇವೆ, ಆ ಪ್ರಾಪರ್ಟೀಸ್‌ಗಳನ್ನು

ಐಡೆಂಟಿಫೈ ಮಾಡಿ ಅದನ್ನು ಕೋರ್ಟ್ ನಿಂದ ಮೂವ್ ಮಾಡಬೇಕಾಗುತ್ತದೆ. ಆಕ್ಚುಯಲಿ ನಾವು ಅಟ್ಯಾಚ್ ಮಾಡುವುದಕ್ಕೆ ಬರುವುದಿಲ್ಲ. Only we can request the court ಅದಕ್ಕೆ ಕೋರ್ಟ್ ಆರ್ಡರ್ ಆಗಬೇಕೆಂದು ಹೇಳಿದ್ದಾರೆ. ಅದನ್ನೂ ಕೂಡ ಇಮ್ಮೀಡಿಯೇಟ್ ಆಗಿ ಮಾಡಿ ಎಂದು ಇಷ್ಟೂ ಹೇಳಿದ್ದೇವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರಾಪರ್ಟಿ ಕಂಪನಿಗಳ ಹೆಸರಿನಲ್ಲಿ ಇರಬಹುದು, ಡೈರೆಕ್ಟರ್ ಹೆಸರಿನಲ್ಲಿ ಇರಬಹುದು, ಹೆಣ್ಣು ಮಕ್ಕಳ ಹೆಸರಿನಲ್ಲಿ ಇರಬಹುದು whatever it is, you do ಎಂದು ಹೇಳಿದ್ದೇವೆ. ಆ ತರಹ ಇನ್‌ಸ್ಟ್ರಕ್ಷನ್ ಅನ್ನು ಕೊಟ್ಟಿದ್ದೇವೆ. ಇನ್ನೂ ಸ್ವಲ್ಪ ಡೀಟೈಲ್ ಬಂದ ನಂತರ, ಇದು ಹೋಂ ಮಿನಿಸ್ಟರ್‌ರವರಿಗೆ ಬರುತ್ತದೆ. ಇದು ಅವರ ಅಧೀನಕ್ಕೆ ಬರುತ್ತದೆ. ಅವರ ಕಡೆಯಿಂದಲೂ ರಿಪ್ಲೈ ಬರುತ್ತದೆ. ಬೇಕಾದರೆ ನಾನು ರಿಪ್ಲೈ ಕೊಡುತ್ತೇನೆ. ನಾನು ಒಂದು ಮಾತನ್ನು ಹೇಳುತ್ತೇನೆ, ಇಲ್ಲಿ ಯಾರಿಗೂ ಪ್ರೋಟೆಕ್ಷನ್ ಕೊಡುವ ಪ್ರಶ್ನೆಯೇ ಇಲ್ಲ. ಯಾರು ಇಲ್ಲಿ ಸಣ್ಣವರು ಇರಲಿ, ದೊಡ್ಡವರು ಇರಲಿ, we will take action against them. Government is committed. Government is determined and Goverment will not compromise. ಈ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಇಲ್ಲಿ ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಇದರ ಬಗ್ಗೆ ನಾನು ಚರ್ಚೆಗೆ ಅವಕಾಶ ಕೊಡುತ್ತಿಲ್ಲ. ಅವರು ಉತ್ತರವನ್ನು ಕೊಟ್ಟಿದ್ದಾರೆ, ದಯಮಾಡಿ ಕುಳಿತುಕೊಳ್ಳಬೇಕು. ಈಗ ಅವರ ಸಹಕಾರ ಇಲಾಖೆ ಬೇಡಿಕೆಯ ಮೇಲೆ ಚರ್ಚೆ ಇದೆ. ಅದರ ಬಗ್ಗೆ ವಿವರವಾಗಿ ಮಾತನಾಡ್ರಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ದಿನಕ್ಕೊಂದು ಕಂಪನಿ ಇಲ್ಲಿ ಟೋಪಿ ಹಾಕಿ ಹೋಗುತ್ತಿವೆ. ಸರ್ಕಾರಕ್ಕೆ ಪ್ರಾಮಾಣಿಕವಾಗಿರತಕ್ಕ ಕಾಳಜಿ ಇದ್ದರೆ ಏನಾದರೂ ಒಂದು ಕಾನೂನನ್ನು ತಂದು ಬಿಲ್ಲನ್ನು ತಂದು ಅವರೆಲ್ಲರನ್ನೂ ಶಿಕ್ಷಿಸತಕ್ಕ ಪ್ರಯತ್ನವಾಗುತ್ತಿತ್ತು. ಈಗ ಎಲ್ಲರಿಗೂ ಟೋಪಿ ಹಾಕಿಕೊಂಡು ಹೋದಮೇಲೆ ನಾವು ವಿಧಾನಸಭೆಯಲ್ಲಿ ಕುಳಿತುಕೊಂಡು ಪೋಸ್ಟ್ ಮಾರ್ಟ್‌ಮ್ ಮಾಡುತ್ತಿದ್ದೇವೆ. ಗುರು ಟೀಕ್ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನು ಐಪಿಎಸ್ ಆಫೀಸರ್ ಮೂಲಕ ಅದನ್ನು ತನಿಖೆ ಮಾಡಿಸುತ್ತೇನೆಂದು ಹೇಳಿದ್ದರು. ಏನಾಯಿತು ಅದು? ಸಾಮಾನ್ಯ ಜನರ ದುಡ್ಡು ಸಾರ್? ಒಂದು

ಸಾವಿರ, ಎರಡು ಸಾವಿರ, ಮೂರು ಸಾವಿರ ರೂ ಈರೀತಿ ಅವರ ಉಳಿತಾಯದ ಹಣವನ್ನು ಈ ರೀತಿ ಸುಲಿಗೆ ಮಾಡಿಕೊಂಡು ಬರುತ್ತಿದ್ದಾರೆ. ಸರ್ಕಾರ ಅವರ ಪಾಲಿಗೆ ಬದುಕಿದೆಯೋ ಸತ್ತಿದೆಯೋ? ಇದನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶ ಕೊಡುತ್ತಿಲ್ಲ. ಮಾನ್ಯ ಮಂತ್ರಿಗಳು ತಾವು ಕುಳಿತುಕೊಳ್ಳಿ. ಈಗ ನಾನು ಸಭೆಯ ಮುಂದಿಡಲಾಗುವ ಕಾಗದಪತ್ರಗಳು. ಅದನ್ನು ತೆಗೆದು ಕೊಳ್ಳುತ್ತಿದ್ದೇನೆ.

6. ಸಭೆಯ ಮುಂದಿಡಲಾದ ಕಾಗದಪತ್ರಗಳು.

(ಅ) ಶ್ರೀ ಆರ್.ವಿ. ದೇಶಪಾಂಡೆ(ಸಹಕಾರ ಸಚಿವರು)(ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳ ಹೆಸರಿನಲ್ಲಿರುವ ಭಾರತ ಸಂವಿಧಾನದ 151(2) ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31 ನೇ ಮಾರ್ಚ್, 2004ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಕರ್ನಾಟಕ ಸರ್ಕಾರದ ಸಿವಿಲ್ ಹಾಗೂ ರಾಜಸ್ವ ಸ್ವೀಕೃತಿಗಳು ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಆ) ಒಂಬತ್ತನೇ ಪಟ್ಟಿಯ ಕಾಗದಪತ್ರಗಳು

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ ಅವರ ಪರವಾಗಿ)

1952ರ ವಿಚಾರಣಾ ಆಯೋಗದ ಅಧಿನಿಯಮ 3(4)ರ ಮೇರೆಗೆ:–

1.ನ್ಯಾಯಮೂರ್ತಿ ಎಸ್.ಆರ್. ರಾಜಶೇಖರಮೂರ್ತಿ ವಿಚಾರಣಾ ಆಯೋಗದ ವರದಿ ಸಂಪುಟ–I ಮತ್ತು II.

2. ಶ್ರೀ ಟಿ.ನಂಜಪ್ಪ ವಿಚಾರಣಾ ಆಯೋಗದ ವರದಿ, ಮೈಸೂರು ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

(ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರ ಪರವಾಗಿ)

1980 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 25ರನ್ವಯ: